# ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ, ರಾಷ್ಟ್ರೀಯ ಹೆದ್ದಾರಿ–4, ಶಿಗ್ಗಾವಿ ತಾ, ಹಾವೇರಿ ಜಿ – 581 205

## ಅಧಿಸೂಚನೆ

ಕಜಾವಿವಿ/ಆವಿ/ತಾಬೋಸಿ/2024–25/550 ದಿನಾಂಕ: 23.12.2024

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಈ ಕೆಳಗಿನ ವಿವರದಂತೆ ನಡೆಯುತ್ತಿರುವ ಸ್ನಾತಕೋತ್ತರ ಎಂ.ಎ., ಎಂ.ಪಿ.ಎ., ಎಂ.ವಿ.ಎ., ಎಂ.ಎಸ್.ಡಬ್ಲ್ಯೂ ಹಾಗೂ ಎಂ.ಬಿ.ಎ. ತರಗತಿಗಳ ಬೋಧನೆ ಕಾರ್ಯಕ್ಕಾಗಿ ಸೇವೆ ಸಲ್ಲಿಸಲು ತಾತ್ಕಾಲಿಕ ನಿಯೋಜನೆ ಆಧಾರದ ಮೇಲೆ ಈ ಕೆಳಕಂಡಂತೆ ನಿಗಧಿಪಡಿಸಿದ ಅರ್ಹತೆ ಹೊಂದಿದ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

1. ಸ್ನಾತಕೋತ್ತರ ಶಿಕ್ಷಣ (ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು)

| ಕ್ರ. ಸಂ. | ವಿಭಾಗ | ವಿದ್ಯಾರ್ಹತೆ | ಪೂರ್ಣಕಾಲಿಕ | ಅರೆಕಾಲಿಕ |
|---|---|---|---|---|
| 1 | ಜಾನಪದ ವಿಜ್ಞಾನ | ಜಾನಪದ ವಿಜ್ಞಾನ /ಜಾನಪದ /ಕನ್ನಡ ಮತ್ತು ಜಾನಪದ /ಮಾನವ ಶಾಸ್ತ್ರ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. | 0 | 02 |
| 2 | ಜನಪದ ಸಾಹಿತ್ಯ | ಜನಪದ ಸಾಹಿತ್ಯ /ಜಾನಪದ /ಕನ್ನಡ ಮತ್ತು ಜಾನಪದ / ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. | 0 | 02 |
| 3 | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ /ಸಮೂಹ ಸಂವಹನ / ಜಾನಪದ ಸಂವಹನದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. | 0 | 02 |
| 4 | ಗ್ರಾಮೀಣ ಮತ್ತು ಬುಡಕಟ್ಟು ನಿರ್ವಹಣೆ | ಎಂ.ಬಿ.ಎ. ಗ್ರಾಮೀಣ ಮತ್ತು ಬುಡಕಟ್ಟು ನಿರ್ವಹಣೆ / ಎಂ.ಬಿ.ಎ / ವಾಣಿಜ್ಯ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. | 0 | 02 |
| 5 | ಕನ್ನಡ ಮತ್ತು ಜಾನಪದ | ಕನ್ನಡ ಮತ್ತು ಜಾನಪದ / ಕನ್ನಡ / ಜಾನಪದ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. | 01 | 02 |
| 6 | ದೃಶ್ಯ ಕಲೆ (ಎಂ.ವಿ.ಎ) | ಎಂ.ಎಫ್.ಎ/ ಎಂ.ವಿ.ಎ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. | 01 | 02 |
| 7 | ಅರ್ಥಶಾಸ್ತ್ರ | ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. | 01 | 02 |
| 8 | ಸಮಾಜಶಾಸ್ತ್ರ | ಸಮಾಜಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. | 01 | 02 |
| 9 | ಇಂಗ್ಲಿಷ್ | ಇಂಗ್ಲಿಷ್‌ನಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. | 01 | 02 |
| 10 | ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯೂ) | ಸಮಾಜಕಾರ್ಯದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. | 01 | 02 |

Scanned with OKEN Scanner

CamScanner

| | | | | |
|---|---|---|---|---|
| 11 | ಪ್ರದರ್ಶನ ಕಲೆ (ಎಂ.ಪಿ.ಎ) | ಪ್ರದರ್ಶನ ಕಲೆ / ರಂಗಭೂಮಿ / ಜನಪದ ಕಲೆ / ಜಾನಪದದಲ್ಲಿ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. ರೆಪರ್ಟರಿಯಲ್ಲಿ ತರಬೇತಿ ಇದ್ದವರಿಗೆ ಆದ್ಯತೆ. | 01 | 02 |
| 12 | ಮಹಿಳಾ ಅಧ್ಯಯನ | ಮಹಿಳಾ ಅಧ್ಯಯನ / ಜಾನಪದ ಸ್ನಾತಕೋತ್ತರ ಪದವಿಯಲ್ಲಿ ಶೇ.55 ಅಂಕ ಪಡೆದು ಉತ್ತೀರ್ಣರಾಗಿರಬೇಕು. | 01 | 01 |

**ಸೂಚನೆಗಳು :**

1. ಅರ್ಜಿ ಸಲ್ಲಿಸಲು ಬಯಸುವ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ NET/SLET/M.Phil/Ph.D ಮತ್ತು ಬೋಧನಾ ಅನುಭವ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.
2. ಆಯ್ಕೆಯಾದ ಸಿಬ್ಬಂದಿಯವರು, ವಿಶ್ವವಿದ್ಯಾಲಯವು ನಿಯೋಜಿಸುವ ಸ್ಥಳಗಳಲ್ಲಿ (ಪ್ರಾದೇಶಿಕ ಕೇಂದ್ರ) ಕಾರ್ಯನಿರ್ವಹಿಸುವುದು ಕಡ್ಡಾಯವಾಗಿದೆ.
3. ಸದರಿ ಹುದ್ದೆಗಳು ತಾತ್ಕಾಲಿಕ ಹುದ್ದೆಗಳಾಗಿದ್ದು, ಸದರಿ ಹುದ್ದೆಗಳನ್ನು ಆಯ್ಕೆ ಮಾಡುವ ಮತ್ತು ರದ್ದುಪಡಿಸುವ ಅಧಿಕಾರವನ್ನು ವಿಶ್ವವಿದ್ಯಾಲಯ ಹೊಂದಿರುತ್ತದೆ.
4. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ನಿಯಮಗಳನ್ನು, ಸುತ್ತೋಲೆಗಳನ್ನು ಕಾಲಕಾಲಕ್ಕೆ ಹೊರಡಿಸುವ ಅಧಿಕಾರಿಗಳ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು.
5. ವಿಶ್ವವಿದ್ಯಾಲಯದ ನಿಯಮಕ್ಕೆ ವಿರುದ್ಧವಾದ ನಡವಳಿಕೆ ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ತಿರಸ್ಕರಿಸುವ ಅಧಿಕಾರ ವಿಶ್ವವಿದ್ಯಾಲಯಕ್ಕಿರುತ್ತದೆ.
6. ಸದರಿ ಅಧಿಸೂಚನೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮೊದಲ ಸೆಮಿಸ್ಟರ್ 4 ತಿಂಗಳು ಮತ್ತು ದ್ವಿತೀಯ ಸೆಮಿಸ್ಟರ್ 4 ತಿಂಗಳು ಅವಧಿಯ ಸೇವೆಯನ್ನು ಸಲ್ಲಿಸುವುದು ಮತ್ತು ಸದರಿ ಅವಧಿಯಲ್ಲಿ ನಿಯಮಾನುಸಾರ ನಿಗಧಿತ ಪಠ್ಯಕ್ರಮವನ್ನು ಪೂರ್ಣವಾಗಿ ಬೋಧಿಸುವುದು ಕಡ್ಡಾಯವಾಗಿರುತ್ತದೆ.
7. ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಅನುಲಕ್ಷಿಸಿ ಅಗತ್ಯಕನುಗುಣವಾಗಿ ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ-ಕಡಿತಗೊಳಿಸುವ ಅಧಿಕಾರ ವಿಶ್ವವಿದ್ಯಾಲಯ ಹೊಂದಿರುತ್ತದೆ.
8. ಸಾಮಾನ್ಯ ವರ್ಗದ ಅಭ್ಯರ್ಥಿಗಳು **ರೂ. 2,000/-(ರೂ. ಎರಡು ಸಾವಿರ ಮಾತ್ರ)** ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ ಪ್ರ-ವರ್ಗಕ್ಕೆ ಸೇರಿದ ಅಭ್ಯರ್ಥಿಗಳು **ರೂ. 1,000/- (ರೂ. ಒಂದು ಸಾವಿರ ಮಾತ್ರ)** ಗಳ ಶುಲ್ಕವನ್ನು ಶಿಗ್ಗಾವಿಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗೆ ಪಾವತಿಯಾಗುವಂತೆ ಡಿ.ಡಿ.ಯನ್ನು **'ಹಣಕಾಸು ಅಧಿಕಾರಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ'** ಇವರ ಹೆಸರಿಗೆ ಪಡೆದು ಅರ್ಜಿಯನ್ನು ದ್ವಿಪ್ರತಿಯಲ್ಲಿ **ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ** ಇವರಿಗೆ **ದಿನಾಂಕ: 12/01/2025 ರ ಸಂಜೆ 5.30 ರೊಳಗೆ** ಅರ್ಜಿ ಸಲ್ಲಿಸತಕ್ಕದ್ದು.
9. ಸಂದರ್ಶನ ದಿನಾಂಕವನ್ನು ನಂತರ ತಿಳಿಸಲಾಗುವುದು.
10. ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಅಧಿಸೂಚನೆಯ ವಿವರಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.
11. ಅಪೂರ್ಣ ಮತ್ತು ಅವಧಿ ಮೀರಿಬಂದ ಅರ್ಜಿಯನ್ನು ನಿಯಮಾನುಸಾರ ಪರಿಗಣಿಸುವುದಿಲ್ಲ.
12. ಹೆಚ್ಚಿನ ಮಾಹಿತಿಗೆ ವಿಶ್ವವಿದ್ಯಾಲಯದ ದೂರವಾಣಿ ಸಂಖ್ಯೆ: 0836-2255180 / 8762600898 / 7899855189 ರ ಮೂಲಕ ಸಂಪರ್ಕಿಸಬಹುದಾಗಿದೆ.

**ಆದೇಶದ ಮೇರೆಗೆ,**

**ಕುಲಸಚಿವರು**

ಕುಲಸಚಿವ 23/12/2024

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ ಶಿಗ್ಗಾವಿ (ತಾ॥) ಹಾವೇರಿ ಜಿಲ್ಲೆ-581205

Scanned with OKEN Scanner

CamScanner